# 'ಸೂಪರ್ ಸ್ಟಾರ್ ಆಗಿಬಿಡ್ತೀನಿ ಅಂದ್ಕೊಂಡಿದ್ದೆ

**ಅಕ್ಷತಾ ಕೃಷ್ಣಮೂರ್ತಿ ದೇಶಪಾಂಡೆ**
**ಉದಯದ 'ಚಿಕ್ಕೆಜಮಾನಿ' ಕಾವೇರಿ**



◆ **ನಟನೆಯನ್ನು ಆರಂಭಿಸಿದ್ದು ಹೇಗೆ?**

ಮೂಲತಃ ಬೆಳಗಾವಿ ನಮ್ಮೂರು. ಅಭಿನಯ ಲೋಕಕ್ಕೆ ಬರಬೇಕು ಎಂಬ ಆಸೆ ಹೈಸ್ಕೂಲ್ ದಿನಗಳಿಂದಲೂ ನನಗಿತ್ತು. ನಟಿ ರಾಧಿಕಾ ಪಂಡಿತ್ ತುಂಬ ಇಷ್ಟ. ಅವರ ಎಲ್ಲ ಸಿನಿಮಾ ನೋಡುತ್ತಿದ್ದೆ. ಅವರಂತೆ ನಾನೂ ನಟಿಸಬೇಕು ಎಂದು ಕನಸು ಕಾಣುತ್ತಿದ್ದೆ. ನಮ್ಮದು ತುಂಬ ಸಾಂಪ್ರದಾಯಿಕ ಕುಟುಂಬ. ಪೋಷಕರು ಓದಬೇಕು, ಒಳ್ಳೆಯ ಉದ್ಯೋಗಕ್ಕೆ ಸೇರಬೇಕು ಎಂದಷ್ಟೇ ಹೇಳುತ್ತಿದ್ದರು. ನನ್ನ ಆಸಕ್ತಿಗೆ ಆರಂಭದ ದಿನದಲ್ಲಿ ಬೇಡ ಎನ್ನುವ ಸಲಹೆಯನ್ನೇ ನೀಡುತ್ತಿದ್ದರು. ಬೆಂಗಳೂರಿಗೆ ಬಂದು ಹೋಗಲು ಪೋಷಕರೇ ದುಡ್ಡು ಕೊಡಬೇಕಿತ್ತು. ಅವರ ಮನವೊಲಿಸಿ ನಾನು ನಟಿಸಲು ಸಿದ್ಧಳಾದೆ.

ಆಗ ಬಿಕಾಂ ಮೊದಲನೇ ವರ್ಷದಲ್ಲಿ ಓದುತ್ತಿದ್ದೆ. ಫೇಸ್‌ಬುಕ್‌ನಲ್ಲಿ ನನ್ನ ಫೋಟೊ ಶೂಟ್ ಮಾಡಿಸಿ ಹಾಕಿದೆ. ಅದನ್ನು ನೋಡಿ ಡಾನ್ಸ್ ರಿಯಾಲಿಟಿ ಶೋಗೆ ಆಹ್ವಾನಿಸಿದರು. ಅದು ಸುಳ್ಳಿರಬಹುದು ಎಂದು ಯೋಚಿಸಿ, ತರಬೇತಿ ಪಡೆದ ವೃತ್ತಿಪರ ಡಾನ್ಸರ್ ಅಲ್ಲ ಎಂದು ಸುಮ್ಮನಾದೆ. ಅಷ್ಟರಲ್ಲಿ ಧಾರಾವಾಹಿಗಳ ಆಡಿಷನ್‌ಗೆ ಸಂದೇಶ ಬರಲು ಆರಂಭಿಸಿದವು. ಭಯ ಇದ್ದರೂ ನಮ್ಮ ತಂದೆ ತಾಯಿ ಒಪ್ಪಿಸಿ ಆಡಿಷನ್‌ಗೆ ಒಮ್ಮೆ ಸಿದ್ಧಳಾದೆ. ನನ್ನ ಅಕ್ಕನನ್ನು ಜೊತೆ ಮಾಡಿ ಅಮ್ಮ ಕಳಿಸಿದ್ದರು. ರಾತ್ರಿ ಬೆಳಗಾವಿಯಿಂದ ಹೊರಟರೆ ಮರುದಿನ ರಾತ್ರಿ ಬೆಂಗಳೂರಿನಿಂದ ಮರಳುತ್ತಿದ್ದೆವು. ಹೀಗೆ ಆರು ತಿಂಗಳು ಆಡಿಷನ್ ನೆಪದಲ್ಲಿ ಓಡಾಡಿದ್ದೆ. ಬೇಸರವಾಗಿ ಇದು ಆಗಲ್ಲ ಎಂದು ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೆ. ಹಾಗಿರುವಾಗಲೇ ಸ್ಟಾರ್ ಸುವರ್ಣದ 'ಅಮೃತವರ್ಷಿಣಿ 2'ಗೆ ಕರೆಬಂತು. ಲುಕ್ ಟೆಸ್ಟ್‌ಗೆ ಕರೆದರು. ಬರಲು ಇರುವ ಹಣಕಾಸಿನ ಕಷ್ಟ ಹೇಳಿ, ನಿಶ್ಚಿತವಾಗಿ ಕೊಡುವುದಾದರೆ ಮಾತ್ರ ಬರುವೆ ಎಂದು ಹೇಳಿದೆ. ಅದೇ ಸಮಯಕ್ಕೆ ಮತ್ತೊಂದರಿಂದ ಕರೆಬಂತು. ಎರಡರಲ್ಲೂ ಅವಕಾಶ ಸಿಕ್ಕಿತು. ಆಗ ನಾನು 'ಅಮೃತವರ್ಷಿಣಿ' ಆಯ್ಕೆ ಮಾಡಿಕೊಂಡೆ.

◆ **ಗೊತ್ತಿಲ್ಲದ ಕಲೆಯನ್ನು ಹೇಗೆ ನಿಮ್ಮದಾಗಿಸಿದಿರಿ?**

ಮೂಲಭೂತವಾಗಿ ಭಾಷೆಯ ತೊಡಕು ಆರಂಭದಲ್ಲಿ ಕಾಡಿತು. ಬೆಳಗಾವಿ ಕನ್ನಡದ ಧಾಟಿನೇ ಬೇರೆ. ಬೆಂಗಳೂರು ಕನ್ನಡವೇ ಬೇರೆ. ಮಾತ್ರವಲ್ಲ ನಟನೆ ಒಂದಿಷ್ಟೂ ಗೊತ್ತಿರಲಿಲ್ಲ. ಅದರಿಂದಾಗಿ ಭೀತಿಗೆ ಒಳಗಾಗಿದ್ದೆ. ನಿರ್ದೇಶಕ ಅನಿಲ್ ಕೋರಮಂಗಲ ಅವರಿಗೆ ನನಗೆ ನಟನೆ ಬರಲ್ಲ ಅಂದೆ. ನಟನೆ ತುಂಬ ಸರಳ ಎಂದು ಅವರು ಕಲಿಸಿಕೊಟ್ಟರು. ಬಟ್ಟೆಟ್ಟುಕೊಂಡು ಬಾಗಿಲಿನಿಂದ ಇಣುಕುವ ಮೊದಲ ದೃಶ್ಯ ಒಂದೇ ಕ್ಲಿಕ್‌ಗೆ ಓಕೆ ಆಯಿತು. ನಂತರ ಮತ್ತೊಂದು ಇನ್ನೊಂದರಲ್ಲಿ ನಟಿಸುತ್ತಲೇ ಅಭಿನಯ ಅಭ್ಯಾಸ ಮಾಡಿಕೊಂಡೆ.

◆ **ಚಿಕ್ಕೆಜಮಾನಿ ಆಗುವುದು ಯಾವಾಗ?**

ಅದುವೇ ಈ ಕಥೆಯ ಕುತೂಹಲದ ಘಟ್ಟ. 'ಚಿಕ್ಕೆಜಮಾನಿ' ಕಥೆ ಹೇಳುವ ಬಗೆಯೇ ಭಿನ್ನ. ಈ ಪಾತ್ರ ತುಂಬ ಚೆನ್ನಾಗಿದೆ. ನಮ್ಮ ತಾತ ಉದಾರಿ. ಅವರು ಒಮ್ಮೆ ಒಬ್ಬರಿಗೆ ಸಹಾಯ ಮಾಡಿದ್ದರು. ಅದರಿಂದ ಅವರು ದೊಡ್ಡದಾಗಿ ಬೆಳೆದಿದ್ದಾರೆ. ಅವರಿಗೆ ಮಕ್ಕಳಿದ್ದರೂ ಮನೆತನದ ಗೌರವ ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಇಲ್ಲ. ಅವರ ಅಳಿಯ ವಿಪರೀತ ಸ್ವಾರ್ಥಿ. ಮಗನೊಬ್ಬ ಜೂಜುಕೋರ, ಮತ್ತೊಬ್ಬ ಬೀದಿ ಸುತ್ತುತ್ತಾನೆ. ಹೀಗಿರುವಾಗ ಅವರಿಗೆ ತಮ್ಮ ಕುಟುಂಬದ ಹೆಸರನ್ನು ಉಳಿಸುವುದು ಹೇಗೆ ಎಂಬ ಒತ್ತಡ ಶುರುವಾಗಿದೆ. ಆ ಮನೆಯನ್ನು ನಾನು ಹೇಗೆ ಸೇರುತ್ತೇನೆ, ಅಲ್ಲಿ ಚಿಕ್ಕೆಜಮಾನಿ ಹೇಗೆ ಆಗುತ್ತೇನೆ ಎನ್ನುವುದು ಕಥೆಯ ಹೂರಣ. ಚಿತ್ರೀಕರಣವೂ ಸೊಗಸಾಗಿದೆ. ಸಕಲೇಶಪುರದ ವಾತಾವರಣವನ್ನು ನೈಜವಾಗಿ ಕಟ್ಟಿಕೊಟ್ಟಿದ್ದಾರೆ.

◆ **ಬೆಂಗಳೂರಿಗೆ ಬಂದ ಹೊಸತರಲ್ಲಿ ಜೀವನ ಹೇಗಿತ್ತು?**

ಹಣಕಾಸಿನ ವಿಷಯದಲ್ಲಿ ತುಂಬ ಲೆಕ್ಕಾಚಾರ ಮಾಡುತ್ತಿದ್ದೆ. ಅದು ಅನಿವಾರ್ಯ ಕೂಡ ಆಗಿತ್ತು. ಕೆಲದಿನ ಸಂಬಂಧಿಕರ ಮನೆಯಲ್ಲಿದ್ದೆ. ಆಗ ಸ್ವಲ್ಪ ಕಷ್ಟ ಆಗ್ತಿತ್ತು. ಅದು ಅನಿವಾರ್ಯವಾಗಿತ್ತು. ಯಾಕೋ ಸರಿ ಅನ್ನಿಸಲಿಲ್ಲ. ಕೂಡಲೇ ನನ್ನ ಸಹನಟಿಯೊಬ್ಬರ ಜೊತೆ ಸೇರಿ ಬಾಡಿಗೆ ಮನೆಕೊಂಡು ಉಳಿದುಕೊಂಡೆ. ಆರ್ಥಿಕವಾಗಿ ಒಂದಿಷ್ಟು ಸದೃಢ ಆದ ಮೇಲೆ ನಾನೇ ಸ್ವತಂತ್ರವಾಗಿ ಮನೆಯನ್ನು ಮಾಡಿಕೊಂಡಿದ್ದೇನೆ.

ಮೊದಲ ಧಾರಾವಾಹಿ ಸಿಕ್ಕ ತಕ್ಷಣ ಪರೀಕ್ಷೆಯನ್ನು ಬರೆಯುವುದಿಲ್ಲ ಎಂದು ನಿರ್ಧರಿಸಿದ್ದೆ. ಇನ್ನೇನು ಸೂಪರ್ ಸ್ಟಾರ್ ಆಗುತ್ತೇನೆ ಎಂದು ಭ್ರಮಿಸಿದ್ದೆ. ಅಮ್ಮನೆದುರು ದೊಡ್ಡದಾಗಿ ನನ್ನ ಬಗ್ಗೆ ಕೊಚ್ಚಿಕೊಂಡಿದ್ದೆ. ದಿನಕಳೆದ ಮೇಲೆ ನನಗೂ ವಾಸ್ತವ ಏನು ಎನ್ನುವುದು ಅರ್ಥವಾಯಿತು. ಈಗ ಒಳ್ಳೆಯ ಜೀವನ ಸಿಕ್ಕಿದೆ. ತುಂಬ ಅದ್ಭುತವಾದ ಬದುಕನ್ನು ಅಭಿನಯದ ಮೂಲಕವೇ ಕಟ್ಟಿಕೊಳ್ಳಬಲ್ಲೆ ಎನ್ನುವ ಭರವಸೆ ಮತ್ತು ವಿಶ್ವಾಸ ನನಗಿದೆ.

■ ರಾಘವೇಂದ್ರ ಕೆ.